ಪ್ರಜಾವಾಣಿ

# ‘100 ಕಟ್ಟಡಕ್ಕೊಂದು ಧಾರ್ಮಿಕ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಪ್ರತಿ 100 ಕಟ್ಟಡಕ್ಕೆ ಒಂದು ಧಾರ್ಮಿಕ ಕೇಂದ್ರ ಇದೆ. ಆದರೆ, ಈ ಪ್ರಮಾಣದಲ್ಲಿ ಶಿಕ್ಷಣ ಸಂಸ್ಥೆಗಳು ಇಲ್ಲ’ ಎಂದು ಕ್ಯಾಲಿಫೋರ್ನಿಯಾ ವಿಶ್ವವಿ ದ್ಯಾಲಯದ ಡಾ. ಪ್ರದೀಪ್ ಚಿಬ್ಬೇರ್ ಬೇಸರ ವ್ಯಕ್ತಪಡಿಸಿದರು.

ಜೈನ್ ವಿಶ್ವವಿದ್ಯಾಲಯ, ‘ಲೋಕನೀತಿ’ ಸಂಸ್ಥೆ, ಜಾರ್ಜ್‌ಟೌನ್ ವಿಶ್ವವಿದ್ಯಾಲಯ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಗರದ ಜೈನ್ ವಿಶ್ವವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ‘ಧರ್ಮ ಮತ್ತು ಭಾರತೀಯ ರಾಜಕಾರಣ’ ಕುರಿತ ಚರ್ಚಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಹಿಂದೆ ರಾಜಕಾರಣದಲ್ಲಿ ಧರ್ಮಕ್ಕೆ ಹೆಚ್ಚಿನ ಆದ್ಯತೆ ಇರಲಿಲ್ಲ. ಇಂದು ತದ್ವಿರುದ್ಧ ಸ್ಥಿತಿ ಇದೆ. ಹೊಸ ದೇವರ ಆರಾಧನೆ ಹೆಚ್ಚುತ್ತಿದೆ.




ಸಂವಾದದಲ್ಲಿ ಡಾ. ಪ್ರದೀಪ್ ಚಿಬ್ಬೇರ್ ಮಾತನಾಡಿದರು. ಜೈನ್ ವಿವಿಯ ಸಹಕುಲಪತಿ ಡಾ.ಸಂದೀಪ್ ಶಾಸ್ತ್ರಿ, ಹಿರಿಯ ಪತ್ರಕರ್ತ ರಾಜದೀಪ್ ಸರದೇಸಾಯಿ ಚಿತ್ರದಲ್ಲಿದ್ದಾರೆ

ಹೊಸ ಗುರುಗಳು ಹುಟ್ಟಿಕೊಳ್ಳುತ್ತಿದ್ದಾರೆ ಎಂದರು.

‘ಭಾರತದಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಗಾಢವಾಗಿ ತೊಡಗಿಕೊಂಡಿದ್ದಾರೆ. ಈ ಆಚರಣೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಆಚರಣೆ ಸ್ಥಳೀಯವೂ ಆಗಿದೆ. ಇದು ಇಲ್ಲಿನ ವೈಶಿಷ್ಟ್ಯ’ ಎಂದರು.

ಹಿರಿಯ ಪತ್ರಕರ್ತ ರಾಜದೀಪ್ ಸರದೇಸಾಯಿ ಮಾತನಾಡಿ, ‘ಯೋಗ ಗುರು ಬಾಬಾ ರಾಮ್‌ದೇವ್ ಅವರು ಚುನಾವಣಾ ಸಮಯದಲ್ಲಿ ಬಿಜೆಪಿಗೆ ಆರ್ಥಿಕ ಹಾಗೂ ಕಾರ್ಯಕರ್ತರ ಒದಗಿಸಿ ನೆರವಾಗಿದ್ದರು. ಯೋಗ ದಿನಾಚರಣೆಯಿಂದ ಹೆಚ್ಚು ಲಾಭವಾದುದು ರಾಮ್‌ದೇವ್ ಅವರಿಗೆ’ ಎಂದರು.

‘ಒಂದು ಕಡೆಯಲ್ಲಿ ಎಂಐಎಂ ಪಕ್ಷದ ಮುಖಂಡ ಅಸಾದುದ್ದೀನ್ ಓವೈಸಿ ಅವರು ಮತೀಯ ವಿಷಬೀಜವನ್ನು ಬಿತ್ತಲು ಪ್ರಯತ್ನಿಸುತ್ತಿದ್ದಾರೆ. ಇನ್ನೊಂದು ಕಡೆಯಲ್ಲಿ ಸಾಧ್ವಿ ಜ್ಯೋತಿ ನಿರಂಜನ್, ಸಾಧ್ವಿ ಮಹಾರಾಜ್ ಮತ್ತಿತರ ರಾಜಕಾರಣಿಗಳ ವಿವಾದಾತ್ಮಕ ಹೇಳಿಕೆಗಳಿಗೆ ಸರ್ಕಾರದಿಂದ ಬೆಂಬಲ ಸಿಗುತ್ತಿದೆ. ಇದು ಅಪಾಯಕಾರಿ ರಾಜಕಾರಣ’ ಎಂದು ವಿಶ್ಲೇಷಿಸಿದರು.

ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಇರ್ಫಾನ್ ನೂರುದ್ದೀನ್, ಜೈನ್ ವಿಶ್ವವಿದ್ಯಾಲಯ ಟ್ರಸ್ಟ್ ಅಧ್ಯಕ್ಷ ಚೆನ್‌ರಾಜ್ ರಾಯ್‌ಚಂದ್ ಅಧ್ಯಕ್ಷತೆ ವಹಿಸಿದ್ದರು.